## ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ

### ಸಿ.ಸಿ.ನಂ.77/2015

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಆರ್. ಕೃಷ್ಣ | ಪಿ.ಡಬ್ಲ್ಯೂ-02 |
| ತಂದೆಯ ಹೆಸರು | : | ಲೇ.ರಂಗಯ್ಯ | ಸಿ.ಡಬ್ಲ್ಯೂ-03 |
| ವಯಸ್ಸು | : | 50 ವರ್ಷ | |
| ಉದ್ಯೋಗ | : | ಅಬಕಾರಿ ರಕ್ಷಕ, ಪಿರಿಯಾಪಟ್ಟಣ ಅಬಕಾರಿ ವಲಯ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 21.09.2016 |
| ವಾಸಸ್ಥಳ | : | ಪಿರಿಯಾಪಟ್ಟಣ | |

ಮುಖ್ಯ ವಿಚಾರಣೆ ಃ ಎಪಿಪಿ ರವರಿಂದಃ

. ನಾನು 2005 ರಿಂದ 2015 ರವರೆಗೆ ಹೆಚ್.ಡಿ.ಕೋಟೆ ಅಬಕಾರಿ ವಲಯದಲ್ಲಿ ಅಬಕಾರಿ ರಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ. ದಿನಾಂಕಃ15.01.2009 ರಂದು ಕ್ಯಾತನಹಳ್ಳಿ ಗೇಟ್ ಬಳಿ ನಾನು, ಚಾಸಾ-1, 2, 4, 5 ಮತ್ತು 7ರವರು ಗಸ್ತು ಮಾಡುತ್ತಿದ್ದಾಗ ರಾತ್ರಿ 9.15 ಗಂಟೆ ಸಮಯದಲ್ಲಿ ಚಾಸಾ-7ರವರಿಗೆ ಖಚಿತ ಮಾಹಿತಿ ಬಂದಿರುತ್ತದೆ. ಅದರಂತೆ ನಾವು ಗಂಗಡಹೊಸಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿ ರಾಜು ಬಿನ್ ಗುರುವೇಗೌಡ ರವರ ಬಗ್ಗೆ ವಿಚಾರಿಸುತ್ತಿದ್ದಾಗ ಅಲ್ಲಿ ಸುಮಾರು 7-8 ಜನ ವ್ಯಕ್ತಿಗಳು ಬಂದು ನಿಂತಿದ್ದರು ಅವರ ಪೈಕಿ ಒಬ್ಬ ವ್ಯಕ್ತಿಯು ನಮಗೆ ರಾಜು ಮನೆಯನ್ನು ತೋರಿಸಿದರು. ಆ ವ್ಯಕ್ತಿಗಳನ್ನು ಪಂಚರಾಗಿ ಬರಲು ಕೇಳಿಕೊಂಡಾಗ ಅವರು ನಿರಾಕರಿಸಿರುತ್ತಾರೆ. ಮನೆಯ ಬಾಗಿಲಿನಿಂದ ಮುಂದೆ ನಿಂತು ರಾಜು ಎಂದು ಕೂಗಿದಾಗ ಒಬ್ಬ ಆಸಾಮಿಯು ಅಲ್ಲಿಗೆ ಬಂದಿರುತ್ತಾರೆ. ಅವರ ಹೆಸರು ಕೇಳಿದಾಗ ರಾಜು ಬಿನ್ ಗುರುವೇಗೌಡ ತಿಳಿಸಿದರು. ಸದರಿ ಆಸಾಮಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯಾಗಿರುತ್ತಾರೆ ಅವರನ್ನು ನೋಡಿ ಗುರುತಿಸಿರುತ್ತೇನೆ. ಆರೋಪಿಗೆ ಬಾತ್ಮೀ ವಿಷಯ ತಿಳಿಸಿ ಮನೆಯನ್ನು ಶೋಧನೆ ಮಾಡಿ ನೋಡಿದಾಗ ಮಂಚದ ಕೆಳಗೆ ಒಂದು ಪ್ಲಾಸ್ಟಿಕ್ ಚೀಲ ಇಟ್ಟಿರುವುದು ಕಂಡುಬಂದಿತು. ಅದನ್ನು ಲಾಠಿಯಿಂದ ಹೊಡೆದು ನೋಡಿದಾಗ ಗಾಜಿನ ಶಬ್ದ ಕೇಳಿಬಂದಿತು. ಚೀಲವನ್ನು ಹೊರಗೆ ತೆಗೆದು ಪರಿಶೀಲನೆ ಮಾಡಿ ನೋಡಿದಾಗ 180 ಎಂಎಲ್‌ನ 50 ಮದ್ಯದ ಬಾಟಲ್‌ಗಳು ಇರುವುದು ಕಂಡುಬಂದಿತು. ಅವುಗಳ ಪೈಕಿ 30 ಒರಿಜಿನಲ್ ಚಾಯ್ಸ್ ವಿಸ್ಕಿ ಬಾಟಲ್‌ಗಳಾಗಿದ್ದು, ಇನ್ನು ಉಳಿದ 20 ಬಾಟಲ್‌ಗಳು ನಂ.1 ಹೈವೇ ವಿಸ್ಕಿ ಆಗಿದ್ದವು. ಅಲ್ಟ್ರಾವೈಲೆಟ್ ಉಪಕರಣದಿಂದ ಪರಿಶೀಲನೆ ಮಾಡಿ ನೋಡಿದಾಗ ಸದರಿ ಮದ್ಯದ ಬಾಟಲ್‌ಗಳು ನಕಲಿ ಎಂದು ತಿಳಿದುಬಂದಿತು. ಸದರಿ ಬಾಟಲ್‌ಗಳನ್ನು ಮಹಜರ್ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಳ್ಳಲಾಯಿತು. ಅವುಗಳ ಪೈಕಿ ಒರಿಜಿನಲ್ ಚಾಯ್ಸ್ ವಿಸ್ಕಿಯ 18 ಬಾಟಲ್‌ಗಳು ಮತ್ತು ನಂ.1 ಹೈವೇ ವಿಸ್ಕಿಯ 10 ಬಾಟಲ್‌ಗಳನ್ನು ಮಾದರಿಗಾಗಿ ತೆಗೆದುಕೊಳ್ಳಲಾಯಿತು. ಆರೋಪಿಯನ್ನು ವಿಚಾರಿಸಿದಾಗ ಸದರಿ ಬಾಟಲ್‌ಗಳನ್ನು ಕರಿಮುದ್ದನಹಳ್ಳಿ ಗ್ರಾಮದಿಂದ ಶಿವಕುಮಾರ್ ಎಂಬುವವರು ತಂದು ಕೊಟ್ಟಿದ್ದಾರೆ ಎಂದು ತಿಳಿಸಿದರು. ಮಹಜರ್ ಮಾಡಿದಾಗ ಸಮಯ ಬೆಳಗ್ಗೆ 9.30 ರಿಂದ 10.30 ಗಂಟೆಯಾಗಿತ್ತು. ಸದರಿ ಮಹಜರ್‌ನ್ನು ನೋಡಿದರೆ ಗುರುತಿಸುತ್ತೇನೆ. ಅದರ ಅಸಲು ಪ್ರತಿ ಸಿ.ಸಿ.ನಂ.449/2009 ರ ಕಡತದಲ್ಲಿ

ಇರುತ್ತದೆ. ಆದ್ದರಿಂದ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಗುರುತಿಸಿರುತ್ತಾರೆ ಮತ್ತು ಅವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮಹಜರ್‌ನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಮಾದರಿ ಬಾಟಲ್‌ಗಳನ್ನು ಆ ದಿನ ಬಿಳಿ ಬಟ್ಟೆಯಿಂದ ಹೊಲೆದು ಸೀಲ್ ಮಾಡಲಾಗಿತ್ತು. ಮಾದರಿ ಬಾಟಲ್‌ಗಳನ್ನು ಈ ದಿನ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು, ಅವುಗಳನ್ನು ಸಿ.ಸಿ.ನಂ. 449/2009ರಲ್ಲಿ ಮುದ್ದೆಮಾಲು-1 ರಿಂದ 28 ಎಂದು ಗುರುತಿಸಲಾಗಿದೆ. ನಂತರ ಆರೋಪಿ ಮತ್ತು ಮಾಲುಗಳ ಸಮೇತ ವಲಯ ಕಚೇರಿಗೆ ಹಿಂದಿರುಗಿ ಬಂದಿರುತ್ತೇವೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಿರುತ್ತಾರೆ. ಆರೋಪಿಯು ಕಾಲಾವಕಾಶವನ್ನು ಕೋರಿರುತ್ತಾರೆ. ಆದ್ದರಿಂದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.</u>

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹೆಗ್ಗಡದೇವನಕೋಟೆ.